ಪ್ರಧಾನ / ಹೆಚ್ಚುವರಿ ದಿವಾಣಿ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಜಮಖಂಡಿ

C C No. 496/2015

CW- 2 PW-1

| | |
|---|---|
| ಹೆಸರು | ಪಾಂಡಪ್ಪ |
| ತಂದೆಯ ಹೆಸರು | ಬಸಪ್ಪ ಅಜ್ಜನವರ |
| ವಯಸ್ಸು | 42 ವರ್ಷ |
| ಉದ್ಯೋಗ | ಶಿಕ್ಷಕರು |
| ಊರು | ತೊದಲಬಾಗಿ, ತಾಃ ಜಮಖಂಡಿ |

ಸಾಕ್ಷಿಯನ್ನು ದಿಃ 06-07-2017 ರಂದು ಕರೆದು ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎ ಪಿ ಪಿ ರವರಿಂದ

ಸಿದ್ದರಾಮ ಲೋಣಿ ಚಾಸಾ-3 ನನಗೆ ಪರಿಚಯ . ಅನಿಲಕುಮಾರ ಬಕಾಟೆ ಇವರು ಸಹ ಪರಿಚಯ . ಅನಿಲಕುಮಾರ ಇವರು ಶಿಕ್ಷಕರು ಇರುತ್ತಾರೆ. ನಾನು ಸಹ ತೊದಲಬಾಗಿ ಸ.ಹಿ.ಪ್ರಾ.ಶಾ ಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತೇನೆ. ಅನಿಲಕುಮಾರು ಬಕಾಟೆ ಸಹ ಅದೇ ಶಾಲೆಯಲ್ಲಿ ಸಹ ಶಿಕ್ಷಕರು ಆಗಿದ್ದರು . ಅವರು ಬಿಜಾಪೂರದಿಂದ ತೊದಲಬಾಗಿ ಗ್ರಾಮಕ್ಕೆ ಹೋಗಿ ಬರುವುದು ಮಾಡುತ್ತಿದ್ದರು . ದಿಃ 13-1-15 ರಂದು ನಾನು ಶಾಲೆಯಲ್ಲಿದ್ದಾಗ ಮಧ್ಯಹ್ನ 2 ಗಂಟೆ ನಂತರ ಸದರಿ ತೊದಲಬಾಗಿ ಬಸಸ್ಟಾಂಡನ ಹತ್ತಿತ್ತರ ಆಲದ ಮರ ಹತ್ತಿ ಒಂದು ಟ್ಯಾಕ್ಟರ ಫಲ್ಟಿ ಆಗಿ ಬಿದ್ದಿರುತ್ತದೆ ಎಂದು ಸುದ್ದಿ ಬಂದಿರುತ್ತದೆ. ಆ ರೀತಿ ಟ್ಯಾಕ್ಟರ ಫಲ್ಟಿ ಆಗಿದ್ದರಿಂದ ಸಾಕಷ್ಟು ಜನರಿಗೆ ಗಾಯವಾಗಿ ಮತ್ತು ಕೆಲವು ಜನ ಮೃತಪಟ್ಟಿದ್ದಾರೆಂದು ವಿಷಯ ತಿಳಿದುಬಂತು . ಸುದ್ದಿ ತಿಳಿದ ನಂತರ ನಾನುಸ ಅಪಘಾತದ್ದ ಸ್ಥಳಕ್ಕೆ ಹೋಗಿರುತ್ತೇನೆ, ಅಲ್ಲಿ ಸಂತೆ ನಡೆಯುತ್ತಾ ಇತ್ತು . ಸದರಿ ಸಂತೆಯು ಊರಿನ ಪ್ರಮುಖ ರಸ್ತೆಯಲ್ಲಿ ನಡೆಯುತ್ತ ಇತ್ತು . ನಾನು ಆ ಸ್ಥಳಕ್ಕೆ ಹೋದಾಗ ಅಪಘಾತವಾದ ಟ್ಯಾಕ್ಟರ ಅಲ್ಲಿತ್ತು ಅದಕ್ಕೆ 2 ಟ್ರೇಲರಗಳನ್ನು ಜೋಡಿಸಲಾಗಿತ್ತು . ಸದರಿ ಟ್ಯಾಕ್ಟರನ 2 ಟ್ರೇಲರಗಳಲ್ಲಿ ಕಬ್ಬು ಲೋಡು ಮಾಡಲಾಗಿತ್ತು . ಸದರಿ ಅಪಘಾತವಾದ ಸ್ಥಳದಲ್ಲ ಸಂತೆ ನಡೆಯುತ್ತಿದ್ದು ಅಲ್ಲಿ ಕಬ್ಬು ಹೇರಿದ ಟ್ಯಾಕ್ಟರನ 2 ಟ್ರೇಲರಗಳು ಫಲ್ಟಿಯಾಗಿದ್ದರಿಂದ ರಸ್ತೆಯ ಬದಿಗೆ ಸಂತೆ ಮಾಡಲು ಬಂದಿದ್ದ ಜನರ ಮೇಲೆ ಬಿದ್ದಿದ್ದರಿಂದ ಸ್ಥಳದಲ್ಲಿ 9 ಜನ ಮೃತಪಟ್ಟಿರುತ್ತಾರೆ ಮತ್ತು ಅಂದಾಜು ಸುಮಾರು 10 ರಿಂದ 15 ಜನರಿಗೆ ಗಾಯಗಳು ಸಹ ಆಗಿದ್ದವು. ಆ ನಂತರ ಸದರಿ ಮೃತಪಟ್ಟ ವ್ಯಕ್ತಿಗಳನ್ನು ಮತ್ತು ಗಾಯಾಳುಗಳನ್ನು ಟ್ಯಾಕ್ಟರನ ಅಡಿಯಿಂದ ಹೊರಗೆ ತೆಗೆಯಲಾಯಿತು. ಸದರಿ ಅಪಘಾತವಾದ ಸಸಟ್ಯಾಕ್ಟರ ಚಿಕಲಕಿ ಕ್ರಾಸ ಕಡೆಯಿಂದ ಮುಂದೆ ಹೊರಟಿತ್ತು . ಅನಿಲಕುಮಾರು ಬಕಾಟೆ ಅಪಘಾತವಾದ ಸ್ಥಳದಲ್ಲಿಯೇ

ಮೃತಪಟ್ಟಿರುತ್ತಾರೆ. ಬಕಾಟೆ ಇವರು ಅಪಘಾತಪಡಿಸಿದ ಟಾಕ್ಟರನಲ್ಲಿ ಹೇರಿದ ಕಬ್ಬಿನಡಿಯಲ್ಲಿ ಸಿಕ್ಕಿಕೊಂಡಿದರು. ಅವರು ಅಪಘಾತವಾದ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ಅನಿಲಕುಮಾರ ಬಕಾಟೆ ಇವರ ಶವವನ್ನು ತೆಗೆದು ನೋಡಿದಾಗ ತಲೆಗೆ , ಕೈಗೆ ,ಕಾಲಿಗೆ ಕುತ್ತಿಗೆಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು. ಸದರಿ ತಅಪಘಾತದಲಿಲ ತೀರಿಕೊಂಡ ವ್ಯಕ್ತಿಗಳ ಹೆಸರುಗಳು ಸ್ವಲ್ಪ ಗೊತ್ತು ಅವರುಗಳ ಹೆಸರುಗಳೆಂದರೆ ಮಹಾದೇವಿ , ಚೈತ್ರ , ಸುಶೀಲಬಾಯಿ ಹಾಗೂ ಅನಿಲಕುಮಾರು ಬಕಾಟೆ ಇರುತ್ತವೆ ಮತ್ತು ಉಳಿದವರುಗಳ ಹೆಸರು ಹೇಳಲು ಬರುವುದಿಲ್ಲ. ಅಪಘಾತವಾದ ಸ್ಥಳಕ್ಕೆ ಹೋದಾಗ ಚಾಲಕ ಸ್ಥಳದಲ್ಲಿರಲಿಲ್ಲ. ಸದರಿ ಅಪಘಾತವು ಮಧ್ಯಾಹ್ನ 12 ರಿಂದ 12-15 ರ ಮಧ್ಯದೊಳಗೆ ಆಗಿರುತ್ತದೆ. ಅಪಘಾತದಲ್ಲಿ ಗಾಯಗೊಂಡ ಹೆಸರುಗಳು ನನಗೆ ಗೂತ್ತಿರುವುದಿಲ್ಲ. ಅಪಘಾತದಲ್ಲಿ ಮೃತಪಟ್ಟಿ ಶವಗಳನ್ನು ಜಮಖಂಡಿಯ ಸರಕಾರಿ ಅಸ್ವತ್ರೆಗೆ ಸಾಗಿಸಲಾಗಿತ್ತುದೆ. ಉಳಿದ ಗಾಯಾಳುಗಳನ್ನು ಜಮಖಂಡಿಯ ಉಳಿದ ಆಸ್ವತ್ರೆಗಳಿಗೆ ಸಾಗಿಸಲಾಗಿರುತತದೆ. ಅಪಘಾತವಾದ ಸ್ಥಳದಲ್ಲಿ ರಸ್ತೆ ರಿಪೇರಿ ರೋಡ ಕೆಲಸ ನಡೆದಿತ್ತು . ಅಪಘಾತವಾದ ಸ್ಥಳದಲ್ಲಿ ರೋಡಿನ ರಿಪೇರಿಯನ್ನು ಗುತ್ತಿಗೆ ಹಿಡಿದ ಗುತ್ತಿಗೆದಾರನು ಅಪಘಾತವಾದ ರಸ್ತೆ ಹೊರತುಪಡಿಸಿ ಬೇರೆ ಕಡೆಗೆ ರಸ್ತೆ ಮಾಡಬೇಕಿತ್ತು ಆದರೆ ಆತನು ಮಾಡಿರುವುದಿಲ್ಲ , ಆದ ಕಾರಣ ಅಪಘಾತವಾಗಿರುತದೆ . ರಸ್ತೆ ರಿಪೇರಿ ನಡೆದರೆ ಸಾಮಾನವಾಗಿ ರಸ್ತೆ ಪಕ್ಕದಲ್ಲಿ ಸೂಚನಾ ಫಲಕ ಇಟ್ಟಿರುತ್ತಾರೆ. ಸದರಿ ಸ್ಥಳದಲ್ಲಿ ಯಾವುದೇ ಸೂಚನಾ ಫಲಕ ಹಚ್ಚಿರಲಿಲ್ಲ. ಇದರ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಅಪಘಾತವಾದ ಸುಮಾರು 1 ತಿಂಗಳ ನಂತರ ಪೋಲಿಸೇರು ನನಗೆ ಸಿಪಿಐ ಕಚೇರಿಗೆ ಕರೆಸಿದ್ದರು . ಅಲ್ಲಿ ನನಗೆ ಅಪಘಾತಪಡಿಸಿದ ಟಾಕ್ಟರನ ಚಾಲಕನನ್ನು ತೋರಿಸಿರುತ್ತಾರೆ. ಆತನ ಹೆಸರು ಮೌಲಾಸಾಬ ಅತ್ತಾರ ಎಂದು ತಿಳಿದುಬಂದಿರುತ್ತದೆ. ಅದರ ಬಗ್ಗೆ ಪೋಲಿಪೀಸರು ನನ್ನ ಮರು ಹೇಳಿಕೆಯನ್ನುಪಡೆದುಕೊಂಡಿರುತ್ತಾರೆ. ಆ ನಂತರ ಪುನಃ 1 ತಿಂಗಳ ನಂತರ ನನ್ನು ಜಮಖಂಡಿ ಯ ಸಿಪಿಐ ಕಚೇರಿಗೆ ಕರೆಸಿರುತ್ತಾರೆ. ಆ ಸಮಯದಲ್ಲಿ ರಸ್ತೆ ಗುತ್ತಿಗೆ ಮಾಡಿದ ಗುತ್ತಿಗೆದಾರನ ಹೆಸರು ಐಗಳಿ ಅಂತಾ ಇರುತ್ತದೆ. ಅದರ ಬಗ್ಗೆ ಪೋಲೀಸರು ನನ್ನ ಮರು ಹೇಳಿಕ ಪಡೆದುಕೊಂಡಿರುತ್ತಾರೆ. ಅಪಘಾತಪಡಿಸಿದ ಟಾಕ್ಟರ ಮತ್ತು 2 ಟ್ರೇಲರಗಳನ್ನು ನೋಡಿದರೆ ಗುರುತಿಸಬಲ್ಲೆ ಟಾಕ್ಟರನ ಚಾಲಕನಾದ ಮೌಲಸಾಬ ಅತ್ತಾರ ಈತನನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾ ,ದ ಮುಂದಿರುವ 3 ಜನ ಆರೋಪಿತರಲ್ಲಿ ಬಲಬದಿಯಲ್ಲಿ ಆರೋಪಿಯೇ ಟಾಕ್ಟರನ ಚಾಲಕನಾಗಿರುತ್ತಾನೆ. ಆ ನಂತರ ಅದೇ ದಿನ ಸಂಜೆ ಪೋಲೀಸರೊಂದಿಗೆ ಜಮಖಂಡಿ ಸರಕಾರ ಅಸ್ವತೆರಗೆ ಬಂದಿರುತ್ತೇನೆ, ಅಲ್ಲಿ ನನ ಸಮಕ್ಷಮ ಮೃತಪಟ್ಟ ಅನಿಲಕುಮಾರ ಇವರ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಶವ ಪಂಚನಾಮೆಯನ್ನು ಸಂಜೆ 7 ಗಂಟೆಯಿಂದ 7-

30 ಯವರೆಗೆ ಮಾಡಿರುತ್ತಾರೆ. ಶವ ಪಂಚಾನಮೆ ನೋಡಿದರೆ ಗುರುತಿಸಬಲ್ಲೆ. ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತದೆ. ಶವ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋ ನೊಡಿದರೆ ಗುರುತಿಸಬಲ್ಲೆ. ಸದರಿ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು. ಅಪಘಾತವಾಗುವ ಪೂರ್ವದಲ್ಲಿ ಟ್ರಾಕ್ಟರ ಚಾಲಕನ್ನು ತನ್ನ ಟ್ರಾಕ್ಟರನ್ನು ರಸ್ತೆಯ ಮೇಲೆ ಅಡ್ಡ ತಿಡ್ಡಿಯಾಗಿ ನಡೆಸುತ್ತಿದ್ದ ಎಂದು ತಿಳಿದುಕೊಂಡಿರುತ್ತೇನೆ.

ಪಾಟೀ ಸವಾಲುಃ 1 ಮತುತ 2 ನೇ ಆರೋಪಿ ಪರ ವಕೀಲರು ಗೈರುಹಾಜರು ಇದ್ದು ಮತ್ತು 3 ನೇ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ , ಯಾವುದೇ ಸಕಾರಣಗಳು ಕಂಡು ಬರದೇ ಇದ್ದುದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು .

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಮ್ ಎಫ್ ಸಿ ಜಮಖಂಡಿ.

ಸಾಕ್ಷಿಯ ಸಹಿ